ಸಂಚಿಕೆ ೧೧
ನವೆಂಬರ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್

ಸಂಚಿಕೆ ೧೧
ನವೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ - ಪುಟ ೧
ಪೋಷಕರ ಅಂಕಣ - ಪುಟ ೨
ಹಬ್ಬ ಪುಟ – ೩
ವ್ಯಕ್ತಿ ಪರಿಚಯ - ಪುಟ ೪
ಸಂದರ್ಶನ - ಪುಟ ೫ -೭
ಪ್ರವಾಸ - ಪುಟ ೮
ಚಿಣ್ಣರ ಚಿತ್ತಾರ - ಪುಟ ೯
ನಾ ಓದಿದ ಕಥೆ - ಪುಟ ೧೦
ನಾ ಕಂಡ ಸಿನಿಮಾ - ಪುಟ ೧೧
ಪದ ಹುಡುಕೋಣ - ಪುಟ ೧೨
ಪತ್ರ ಮಾಲೆ – ಮೂರ್ತಿ ತಾತ - ಪುಟ ೧೩-೧೪



ರಜನೀ



ಶರಣ್



ಪ್ರದ್ಯುಮ್ನ



ಪ್ರಕೃತಿ



ಅದಿತ್



**ಸಂಪಾದಕೀಯ: ರಜನೀ ಮಹೇಶ್**

ಬೆಳಕಿನ ಹಬ್ಬ ದೀಪಾವಳಿ. ದೀಪಾವಳಿ ಎಂದ ಕೂಡಲೇ ಮನೆಯ ಮುಂದೆ ಉರಿಯುವ ಹಣತೆಯ ಸಾಲು ದೀಪ, ರಂಗೋಲಿ, ಹೊಸ ಬಟ್ಟೆ, ಪಟಾಕಿ, ಮನೆಯಲ್ಲೇ ತಯಾರಿ ಮಾಡುತಿದ್ದ ಬಣ್ಣ ಬಣ್ಣದ ಗೂಡು ದೀಪ(ಆಕಾಶ ಬುಟ್ಟಿ), ಸಿಹಿ ತಿಂಡಿಗಳು ಕಣ್ಣೆದುರು ಬರುತ್ತದೆ.

ಬಾಲ್ಯದಲ್ಲಿ ನಮ್ಮ ದೀಪಾವಳಿ ಹಬ್ಬ ಆರಂಭ ಆಗುತಿದ್ದದ್ದು ಹಂಡೆಗೆ ನೀರು ತುಂಬುವ ಸಂಭ್ರಮದಿಂದ. ಮರುದಿನ ಸೂರ್ಯೋದಯಕ್ಕೆ ಮುನ್ನ ಎಣ್ಣೆ ಸ್ನಾನ, ಹೊಸ ಬಟ್ಟೆ. ಸಂಜೆ ಗದ್ದೆ, ತೋಟಕ್ಕೆ ಹೋಗಿ ದೀಪ ಇಟ್ಟು ಪೂಜೆ ಮಾಡಿ ಬಲೀಂದ್ರನನ್ನು ಕರೆದು, ತುಳಸಿ ಪೂಜೆ ಮಾಡಿ ಪಟಾಕಿ ಹೊಡೆಯೋದು. ಮಾರನೆ ದಿನ ಗೋಪೂಜೆ.

ದೀಪಾವಳಿ ಹಬ್ಬದಲ್ಲಿ ಗೋಪೂಜೆಗೆ ತುಂಬಾ ಪ್ರಾಮುಖ್ಯತೆ ಇದೆ.ರೈತನ ಜೀವನಾಡಿ ಆಗಿರುವ ಗೋವನ್ನು ದೀಪಾವಳಿಯ ದಿನ ಪೂಜಿಸುವ ಸಂಪ್ರದಾಯ ಅನಾದಿಕಾಲದಿಂದಲೂ ನಡೆದು ಬಂದಿದೆ. ಗೋಪೂಜೆಯ ದಿನ ಗೋವುಗಳಿಗೆ ಸ್ನಾನ ಮಾಡಿಸಿ, ಅರಶಿನ ಕುಂಕುಮದ ಓಕಳಿ ಮಾಡಿಕೊಂಡು ದನಗಳ ಕೋಡಿಗೆ(ಕೊಂಬು) ಬಣ್ಣ ಹಚ್ಚುತ್ತಿದ್ದೆವು. ಒಂದು ಲೋಟವನ್ನು ಓಕಳಿ ಬಣ್ಣದಲ್ಲಿ ಅದ್ದಿ, ದನದ(ಹಸು) ಮೈಗೆಲ್ಲಾ ಹಳದಿ ಕೆಂಪು ಬಣ್ಣದ ಹುಂಡುಗಳನ್ನೂ ಇಡುತ್ತಿದ್ದೆವು. ನಂತರ ಕೆರೆಯಿಂದ ಆಯ್ದು ತಂದ ಕೊಳೆ ಹೂವುನಲ್ಲಿ (ವಾಟರ್ ಲಿಲ್ಲಿ) ಸರ ಮಾಡಿ ದನದ ಕೊರಳಿಗೆ ಕಟ್ಟುತ್ತಿದ್ದೆವು. ಈ ಹೂವನ್ನು ತಂದು ಸರ ಮಾಡಿ ಹಾಕಿ ಪೂಜೆ ಮುಗಿಯುವ ತನಕ ಅದನ್ನು ಅಕ್ಕ ಪಕ್ಕದ ದನಗಳು ಬಾಯಿ ಹಾಕದಂತೆ ಕಾಯುವುದೇ ನಮ್ಮ ಒಂದು ದೊಡ್ಡ ಕೆಲಸವಾಗಿತ್ತು. ಪೂಜೆ ಮಾಡಿ ದನಗಳಿಗೆ ನೈವೇದ್ಯ ಕೊಟ್ಟರೆ ಹಬ್ಬ ಮುಗಿದಂತೆ.



ನಮ್ಮ ಮನೆಗಳಲ್ಲಿ ಈಗ ದನಗಳನ್ನು ಸಾಕುವುದು ಸವಾಲಾಗಿದೆ. ೨ ರಿಂದ ೩ ದನಗಳು ಇದ್ದ ಕಾಲ ಹೋಗಿ ಈಗ ಹಟ್ಟಿಗಳು(ಕೊಟ್ಟಿಗೆ) ಖಾಲಿ ಆಗಿವೆ. ಡೈರಿಯಿಂದ ಹಾಲು ತರುವ ಪರಿಸ್ಥಿತಿ ಬಂದಿದೆ. ಮನೆಯಲ್ಲಿ ಕರು ಹುಟ್ಟುವ ಸಂಭ್ರಮ, ಮನೆಯಲ್ಲಿ ಹುಟ್ಟಿದ ಸಿಂಧು ದನ, ಸುರಭಿ ಕರು, ಆ ದನ ಕಾರುಗಳನ್ನು ಮಾರುವಾಗ ಆಗುವ ಸಂಕಟ, ವರ್ಷ ವರ್ಷ ಮಾಡುತ್ತಿದ್ದ ಗೋಪೂಜೆ ಇವೆಲ್ಲ ಈಗ ಬರೀ ನೆನಪು ಮಾತ್ರ.

.



*ಹಚ್ಚೇವು ಕನ್ನಡದ ದೀಪ...*

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com




## ಪೋಷಕರ ಅಂಕಣ : ಮಹೇಶ್ ನೀಲಕಂಠ

## ಸಾಧನೆಯತ್ತ ಓಟ...

ಒಬ್ಬ ವ್ಯಕ್ತಿಯ ಜೀವನದಲ್ಲಿ ಸಾಧನೆ ಮಾಡುವುದಕ್ಕೆ ಹಲವಾರು ಅವಕಾಶಗಳು ಬರುತ್ತವೆ. ಆದರೆ ಅಂಥ ಅವಕಾಶ ಗುರುತಿಸಿ ಸಕಾಲದಲ್ಲಿ ಸದುಪಯೋಗಪಡಿಕೊಳ್ಳುವವರು ಬೆರಳೆಣಿಕೆಯಷ್ಟು. ಸಾಧನೆ (achievement) ಅಂದ ಕೂಡಲೇ ನಿಮ್ಮ ಮನಸ್ಸಿಗೆ ಬರುವುದು ದೊಡ್ಡ ಸಾಧನೆ. ಉದಾಹರಣೆಗೆ, ಅತ್ಯುತ್ತಮ ಹಾಡುಗಾರ, ಅತ್ಯುತ್ತಮ ವಿಜ್ಞಾನಿ ಅಥವಾ ಕ್ರೀಡಾಪಟು. ಅಂಥ ಸಾಧನೆ ಮಾಡಲು ಬಹಳ ಸಮಯ ಮತ್ತು ಪರಿಶ್ರಮ ಬೇಕಾಗುತ್ತದೆ. ಯಾವಾಗ ನನಗೆ ಅದು ಸಾಧ್ಯವಾಗುವ ಲಕ್ಷಣಗಳು ಇಲ್ಲವೆನಿಸಿದಾಗ, ನಾವು ಪ್ರಯತ್ನ ಮಾಡುವುದಕ್ಕೂ ಹೋಗಿವುದಿಲ್ಲ.

ನನ್ನ ಅನುಭವದ ಪ್ರಕಾರ ಯಾವುದೇ ವೈಯಕ್ತಿಕ ಸಾಧನೆ ಆ ವ್ಯಕ್ತಿಯ ಮನಸ್ಸಿಗೆ ಸಂತೃಪ್ತಿ ಕೊಡುತ್ತದೆಯೋ ಅದೂ ಕೂಡ ದೊಡ್ಡ ಸಾಧನೆ -ಯಷ್ಟೇ ಮಹತ್ವವಾಗಿರುತ್ತದೆ. ಯಾವುದೇ ವೈಯಕ್ತಿಕ ಸಾಧನೆ ಯಶಸ್ವಿಯಾಗಲು ಹಲವಾರು ಅಂಶಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. 1. ಗುರಿ (goal) 2. ಪರಿಶ್ರಮ( effort) 3. ಉಪಕರಣಗಳು( tools) 4.ಸ್ಫೂರ್ತಿ(inspiration, motivation) 5. ಆತ್ಮಸ್ಥೈರ್ಯ (self confidence) 6. ಗುರು( trainer) ಇತ್ತೀಚೆಗೆ ನಾನು ಮ್ಯಾರಥಾನ್ ಓಟದಲ್ಲಿ ಪಾಲ್ಗೊಂಡಿದೆ. ಮ್ಯಾರಥಾನ್ ಅಂದರೆ 26.2 ಮೈಲಿ ಓಡುವುದು. ಸಾಮಾನ್ಯವಾಗಿ ಎಲ್ಲರಿಗೂ ಮ್ಯಾರಥಾನ್ ಓದುವುದು ಸಾಧ್ಯವಾಗುವುದಿಲ್ಲ ಎಂಬ ಭಾವನೆ ಇರುತ್ತದೆ. ಕಾರಣಗಳು ಅನೇಕ. ಮುಖ್ಯವಾಗಿ ದೈಹಿಕ ಸಾಮರ್ಥ್ಯ, ವಯಸ್ಸು, ಆಹಾರ ಪದ್ಧತಿ ಹಾಗೂ ಸಮಯದ ಅಭಾವ. ನಾನು ಸಹ ಇದೇ ಕಾರಣಗಳಿಂದ ಪ್ರಯತ್ನಿಸಲಿಲ್ಲ. ನಾನು ಸಸ್ಯಾಹಾರಿ ಆಗಿದ್ದರಿಂದ ಇದು ಕಷ್ಟ ಸಾಧ್ಯ ಎಂಬ ಸಾರ್ವಜನಿಕ ನಂಬಿಕೆ ಯೂ ಬಲವಾಗಿದ್ದರಿಂದ ಒಂದು ಹಂತದಲ್ಲಿ ನನ್ನಿಂದ ಆಗುವುದಿಲ್ಲ ಎಂಬ ಭಾವನೆ ಸಹ ಬಂದಿತ್ತು.


ಈ ಬಾರಿಯ ಮ್ಯಾರಥಾನ್ ಓಟದಲ್ಲಿ ನನ್ನ ಜೊತೆ ನನ್ನ ಸ್ನೇಹಿತರಾದ ಕಿರಣ್, ಅಶೋಕ್, ವಿನೋದ್, ಮಹಂತೇಶ್, ರಾಕೇಶ್, ರಮೇಶ್, ಅನುಪಮ್ ಹಾಗು ಸುಕಾಂತ್ ಭಾಗವಹಿಸಿದ್ದರು. ಸುಮಾರು ೬ ತಿಂಗಳ ಹಿಂದೆ ನಮ್ಮ ತರಬೇತಿ ಶುರುವಾಯಿತು. ತರಬೇತಿ ಸಮಯದಲ್ಲಿ ಎಲ್ಲರಿಗೂ ನೋವಿನ ಸಮಸ್ಯೆ ಬರುತ್ತದೆ ಹಾಗು ನನ್ನಿಂದ ಆಗುವುದಿಲ್ಲ ಎಂದೆನಿಸುತ್ತದೆ. ಆವಾಗ ನಾವು ಒಬ್ಬರನ್ನೊಬ್ಬರು ಹುರಿದುಂಬಿಸುತ್ತಿದ್ದೆವು. ಇದರ ಫಲವೇ ನಮ್ಮ ಯಶಸ್ವಿ ಮ್ಯಾರಥಾನ್. ನಾವು ನಮ್ಮ ತರಬೇತಿ ಹಾಗು ಮ್ಯಾರಥಾನ್ ಸಮಯದಲ್ಲಿ ನಮಗೆ ಸ್ಫೂರ್ತಿ ಮತ್ತು ಪ್ರೇರಣೆ ಕೊಡುವ ಹಲವು ವ್ಯಕ್ತಿಗಳನ್ನು ಭೇಟಿ ಮಾಡಿದೆವು.




- ನಮ್ಮ ಗುರು. ಅವರು 65 ವರ್ಷದ ಮಹಿಳೆ.( Bobby ) ಹಾಗು ಅವರು ನಮಗಿಂತ ಚೆನ್ನಾಗಿ ಓಡುತ್ತಾರೆ. ಅವರು ಓಡಲು ಶುರು ಮಾಡಿದ್ದೂ 59 ವರ್ಷ ಇದ್ದಾಗ.
- ಅಲ್ಟ್ರಾ ಮ್ಯಾರಥಾನ್ ರನ್ನರ್ (ಜಾನತನ್ ಸಾವೇಜ್), ಇವರು ೧೦೦ ಮೈಲಿ ಬಿಡದೆ ಓಡುತ್ತಾರೆ.
- ಅರುಣ್ ಎಂಬುವರು ಬರಿಕಾಲಿನಲ್ಲಿ ಮ್ಯಾರಥಾನ್ ಓಡುತ್ತಾರೆ.
- ಎರಡೂ ಕಾಲಿಲ್ಲದೇ ಊರುಗೋಲು ಹಿಡಿದು 13.೧ ಮೈಲಿ ಓಡುತ್ತಾರೆ.
- ಮಕ್ಕಳನ್ನು ಸ್ಟ್ರಾಲರ್ ನಲ್ಲಿ ಕುಳ್ಳಿರಿಸಿ, ತಳ್ಳಿಕೊಂಡು ಓಡುತ್ತಾರೆ.
- 10 ವರ್ಷದ ಹುಡುಗ 26.2 ಮೈಲಿ ಮ್ಯಾರಥಾನ್ ಓಡುತ್ತಾನೆ.

ಇವರೆಲ್ಲಾ ನಮಗೆ ಸ್ಫೂರ್ತಿ ಹಾಗು ನಮ್ಮ ನೋವು, ತೊಂದರೆಗಳನ್ನು ಮರೆತು ಓಡಲು ಶಕ್ತಿ.

ಈ ಸಂದರ್ಭದಲ್ಲಿ ನಾನು ಅನುಸರಿಸಿದ್ದು ಮೇಲೆ ಹೇಳಿದ 6 ಅಂಶಗಳನ್ನು. ಅವುಗಳನ್ನು ನನ್ನ ಈ ಪ್ರಯತ್ನದಲ್ಲಿ ಅಳವಡಿಸಿಕೊಂಡು ಯಶಸ್ವಿಯಾಗಿ ಗುರಿ ತಲುಪಿದ ಹಾಗೂ ಜೀವನದಲ್ಲಿ ಸಾರ್ಥಕತೆ ಸವಿದ ಅನುಭವವಾಯಿತು. ನಾನು ಈ ಸಾಧನೆ ಮಾಡಲು ಇನ್ನೊಂದು ಮುಖ್ಯವಾದ ನನ್ನ ನಂಬಿಕೆ ಏನೆಂದರೆ, "To succeed, compete with yourself, not with others" ಉದಾಹರಣೆಗೆ, ನಾನು ಓಡುವಾಗ ನನ್ನ ಧ್ಯೇಯ ನನ್ನ ಹಿಂದಿನ ಓಟಕ್ಕಿಂತ ಚೆನ್ನಾಗಿ ಓಡಬೇಕು ಎಂದೇ ಹೊರತು ಬೇರೆಯವರೊಂದಿಗೆ ಸ್ಪರ್ಧಿಸುವುದಲ್ಲ. ಕೆಳಗಿನ ಚಿತ್ರದಲ್ಲಿ 6 ಅಂಶಗಳನ್ನು ಹೇಗೆ ಉಪಯೋಗಿಸಿಕೊಂಡೆವು ಅನ್ನುವುದನ್ನು ಬರೆದಿದ್ದೇನೆ.





## ದೀಪಗಳ ಹಬ್ಬ - ದೀಪಾವಳಿ : ಪ್ರದ್ಯುಮ್ನ ನರೇಶ್

ಕತ್ತಲು ಕಳೆದು ಬಾಳಲ್ಲಿ ಬೆಳಕು ಮೂಡಿಸುವ ಹಬ್ಬ ದೀಪಾವಳಿ...
ಅಜ್ಞಾನವೆಂಬ ಕತ್ತಲನ್ನು ಕಳೆದು ಬದುಕಲ್ಲಿ ಸುಜ್ಞಾನವೆಂಬ ಜ್ಯೋತಿಯನ್ನು ಬೆಳಗಿಸುವ ಹಬ್ಬವೇ ದೀಪಾವಳಿ. ದೀಪಾವಳಿ ಎಂದತಕ್ಷಣ ಮನಸುಗಳು ಬೆಳಗಲು ಪ್ರಾರಂಭಿಸುತ್ತವೆ. ಪಟಾಕಿ ದೀಪಾವಳಿಯ ಪ್ರಧಾನ ಆಕರ್ಷಣೆ. ಆಕಾಶದಲ್ಲಿ ಚಿಮ್ಮುವ ಬಾಣಗಳು, ಡಮ್ ಡಮ್ ಎನ್ನುವ ಪಟಾಕಿಗಳು, ಮಕ್ಕಳಿಗಂತೂ ದೀಪಾವಳಿ ಎಂದರೆ ಬಲು ಅಚ್ಚು ಮೆಚ್ಚು. ಮನೆಯಂಗಳದಲ್ಲಿ ಪಟಾಕಿ ಸಿಡಿಸಲು ಚಿಣ್ಣರು ಕಾತುರದಿಂದಿದ್ದಾರೆ. ಇನ್ನು ಮನೆಯ ಸುತ್ತಲೂ ಸಾಲು ಸಾಲು ದೀಪ ಹಚ್ಚುವ ಈ ಹಬ್ಬಕ್ಕೆ ದೀಪಾವಳಿ ಎಂದೇ ಹೆಸರು ಬಂದಿದೆ. ಎಲ್ಲರ ಮನೆ ಮುಂದೆ ಬೆಳಗಲು ಶಿವನಬುಟ್ಟಿಗಳು ಸಜ್ಜಾಗಿವೆ.ಹಾರಾಡಲು ಆಕಾಶಬುಟ್ಟಿಗಳು ಕಾಯುತ್ತಿವೆ. ಮನೆ ಮನೆಗಳೆಲ್ಲವೂ ಈ ಸಮಯದಲ್ಲಿ ದೀಪಗಳ ಬೆಳಕಿನಲ್ಲಿ ಮಿನುಗಲಿವೆ.


ಆಶ್ವಯುಜ ಮಾಸ ಕೃಷ್ಣಪಕ್ಷದ ಚತುರ್ದಶಿ, ಅಮಾವಾಸ್ಯೆ ಹಾಗೂ ಕಾರ್ತಿಕ ಮಾಸ ಶುಕ್ಲಪಕ್ಷದ ಪಾಡ್ಯಮಿ - ಈ ದಿನಗಳಲ್ಲಿ ದೀಪಾವಳಿಯನ್ನು ಆಚರಿಸಲಾಗುತ್ತದೆ.

ದೀಪಾವಳಿ ಹಬ್ಬ ಹೇಗೆ ಪ್ರಾರಂಭವಾಯಿತು ನಿಮಗೆ ಗೊತ್ತಾ ? ರಾಮಾಯಣದ ಶ್ರೀರಾಮನು ರಾವಣನನ್ನು ಸಂಹಾರ ಮಾಡಿ ಅಯೋಧ್ಯಾ ನಗರಕ್ಕೆ ಹಿಂತಿರುಗಿದಾಗ ಅಲ್ಲಿಯ ಜನರು ದೀಪಗಳನ್ನು ಬೆಳಗಿಸಿ ಆಹ್ವಾನಿಸಿದರು. ಆ ದಿನವನ್ನು ಉತ್ತರ ಭಾರತದ ಜನರು ದೀಪಗಳನ್ನು ಇಟ್ಟು ದೀಪಾವಳಿಯನ್ನು ಆಚರಿಸುತ್ತಾರೆ.


ತ್ರೇತಾಯುಗದಲ್ಲಿ ಶ್ರೀ ಕೃಷ್ಣನು ನರಕಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದ ಇದೇ ದಿನವನ್ನು "ನರಕ ಚತುರ್ದಶಿ" ಎಂದು ದಕ್ಷಿಣ ಭಾರತದಲ್ಲಿ ಆಚರಿಸುತ್ತಾರೆ. ದೀಪಾವಳಿಯನ್ನು ಆಚರಿಸುವ ವಿಧಾನ ದೀಪಾವಳಿಯ ಮೊದಲ ದಿನವು ಮನೆಯಲ್ಲ ಶುದ್ಧಗೊಳಿಸಿ, ಮನೆಯ ಮುಂದೆ ರಂಗೋಲಿ ಹಾಕಿ ದೀಪಗಳನ್ನು ಸಾಲು ಸಾಲಾಗಿ ಜೋಡಿಸಿ ಅಂದು ಹೊಸ ಬಟ್ಟೆಯನ್ನು ಧರಿಸಿ ದೀಪಾವಳಿಯನ್ನು ಆಚರಿಸುತ್ತಾರೆ.

ಎರಡನೇ ದಿನವು ಅತ್ಯಂತ ಮಂಗಳಕರ ದಿನ ಎಂದು ನಂಬಲಾಗಿದೆ; ಇದು ಲಕ್ಷ್ಮಿ ಪೂಜೆ ಅಥವಾ ಸಂಪತ್ತಿನ ದೇವತೆಯ ಪೂಜೆಯಂದು ಮಾಡುತ್ತೇವೆ. ವೈಭವ ಮತ್ತು ಸಮಾರಂಭದೊಂದಿಗೆ, ಪೂಜೆಯ ಭಾಗವಾಗಿರುವ ಉಡುಗೊರೆಗಳನ್ನು ಪಾಲ್ಗೊಳ್ಳಲು ಲಕ್ಷ್ಮಿಯನ್ನು ಭಕ್ತರ ಮನೆಗಳಿಗೆ ಆಹ್ವಾನಿಸಿ ಪೂಜೆ ಮಾಡುತ್ತಾರೆ.

ಮೂರನೇ ದಿನವು ಶ್ರೀ ವಿಷ್ಣು ವಾಮನ ಅವತಾರದಲ್ಲಿ ಬಲಿ ಚಕ್ರವರ್ತಿಯನ್ನು ಲೋಕಕಲ್ಯಾಣಕ್ಕಾಗಿ ಪಾತಾಳಲೋಕಕ್ಕೆ ಕಳಿಸಿದನು. ಈ ದಿನವನ್ನು ಬಲಿ ಪಾಡ್ಯಮಿ ಎಂದು ಆಚರಿಸುತ್ತೇವೆ. ದೀಪಾವಳಿಯ ಸಂಭ್ರಮವನ್ನು ಬಂದು ಮಿತ್ರರೊಂದಿಗೆ ಸಿಹಿ ತಿಂಡಿಗಳನ್ನು ಕೊಟ್ಟು ಹಂಚಿಕೊಳ್ಳುತ್ತಾರೆ.








ಸಂಚಿಕೆ ೧೧
ನವೆಂಬರ್ 2018





## ವ್ಯಕ್ತಿ ಪರಿಚಯ : ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ದ. ರಾ. ಬೇಂದ್ರೆಯವರು ಕನ್ನಡ ಸಾಹಿತ್ಯದ ನವೋದಯ ಕಾಲಘಟ್ಟದ ಪ್ರಮುಖ ಕವಿಗಳಲೊಬ್ಬರು. ಅವರನ್ನು **'ಕನ್ನಡದ ವರಕವಿ'** ಎಂದು ಪರಿಗಣಿಸಲಾಗಿದೆ. ಬೇಂದ್ರೆಯವರು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿದಂದ ಪ್ರಸಿದ್ಧರಾಗಿದ್ದಾರೆ.ಭಾರತೀಯ ಜ್ಞಾನಪೀಠವು ೧೯೭೩ ರ ಸಾಹಿತ್ಯ ಪ್ರಶಸ್ತಿಯನ್ನು ದ. ರಾ. ಬೇಂದ್ರೆಯವರ 'ನಾಕುತಂತಿ' ಎಂಬ ಕವನ ಸಂಕಲನಕ್ಕೆ ನೀಡಿ ಗೌರವಿಸಿದೆ .ದಾರ್ಶನಿಕತೆ ಬೇಂದ್ರೆ ಸಾಹಿತ್ಯದ ವಿಶೇಷತೆ. ಅವರ 'ಪಾತರಗಿತ್ತಿ ಪಕ್ಕ' ಕವನ, ಶಿಶು ಗೀತೆಯಾಗಿ ಹಾಡಲ್ಪಟ್ಟರೂ ಅದು ಮನುಷ್ಯನ ಪ್ರಲೋಭನೆಯನ್ನು ವಿವರಿಸುತ್ತದೆ. 'ಮೂಡಲಮನೆಯ' ಕವನವು ಸರ್ವ ವ್ಯಾಪಿ ಶಾಂತಿ ಮತ್ತು ಅದನ್ನು ಸ್ಥಾಪಿಸುವ ಕವಿಯ ಹಂಬಲದ ಪ್ರತೀಕವಾಗಿದೆ. ಹಾಗೆಯೇ 'ಕುಣಿಯೋಣು ಬಾರಾ' ಕವನವು ವೈವಿಧ್ಯಮಯವಾದ ವಿಚಾರ ಲಹರಿಗಳ ಮಹಾ ಸಂಗಮದ ದ್ಯೋತಕವಾಗಿದೆ. ಮೇಲ್ನೋಟಕ್ಕೆ ಬೇಂದ್ರೆಯವರ ಸಾಹಿತ್ಯವು ಪ್ರಾಸಬದ್ಧ ಸಂಗೀತಕ್ಕೆ ಅಳವಡಿಸಿಕೊಂಡತ್ತಿದ್ದರೂ ಅದರ ಒಳಾರ್ಥ ಕೇವಲ ಕಾವ್ಯಾತ್ಮಕ ಮನಸ್ಸು ಅರ್ಥಮಾಡಿಕೊಳ್ಳಬಲ್ಲಂತಹದು.

### ಪ್ರಶಸ್ತಿ, ಪುರಸ್ಕಾರ, ಗೌರವ:

- ೧೯೫೮ 'ಅರಳು-ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- ೧೯೬೫ ಮರಾಠಿ 'ಸಂವಾದ' ಗ್ರಂಥಕ್ಕೆ ಕೇಳ್ಕರ್ ಪ್ರಶಸ್ತಿ.
- ೧೯೬೬ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ.
- ೧೯೬೮ ಭಾರತ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿ.
- ೧೯೬೮ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ.
- ೧೯೭೪ 'ನಾಕುತಂತಿ' ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ
- ೧೯೭೬ ಕಾಶೀ ವಿದ್ಯಾಪೀಠ, ವಾರಾಣಾಸಿ, ಇವರಿಂದ ಗೌರವ ಡಾಕ್ಟರೇಟ್ ಪದವಿ.

### ಅಧ್ಯಕ್ಷತೆ, ಇತ್ಯಾದಿ:


- ೧೯೩೦ ಮೈಸೂರು ಲೇಖಕರ ಗೋಷ್ಠಿ ಅಧ್ಯಕ್ಷ.
- ೧೯೩೫ ಮುಂಬಯಿ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು.
- ೧೯೪೩ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಅಂಬಿಕಾತನಯ ದತ್ತ ಎಂಬ ಕಾವ್ಯನಾಮ ಹೊಂದಿದ್ದ ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕನ್ನಡ ಸಾಹಿತ್ಯ ಲೋಕದ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರಲ್ಲೊಬ್ಬರು. ದ.ರಾ .ಬೇಂದ್ರೆಯವರು ಧಾರವಾಡದಲ್ಲಿ 1886ರ ಜನವರಿ 31ರಂದು ಜನಿಸಿದರು. ಇವರ ತಂದೆ ರಾಮಚಂದ್ರ ಬೇಂದ್ರೆ ಹಾಗೂ ತಾಯಿ ಅಂಬವ್ವ. ಅಂಬಿಕೆಯ ತನಯ ತಾನು ದತ್ತ ಎಂಬ ಅರ್ಥದಲ್ಲಿ ಬೇಂದ್ರೆಯವರು ದ.ರಾ. ಬೇಂದ್ರೆ ಎಂಬ ಕಾವ್ಯನಾಮವನ್ನು ಇರಿಸಿಕೊಂಡರು. ಧಾರವಾಡ ಹಾಗೂ ಸಾಧನಕೇರಿಯ ಪ್ರದೇಶವನ್ನು ನೆಲೆಯಾಗಿಸಿ ಅವರು ಸಾಹಿತ್ಯ ಕೃಷಿ ನಡೆಸಿದರು.ಧಾರವಾಡದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬೇಂದ್ರೆಯವರು ಮಹಾರಾಷ್ಟ್ರದ ಪುಣೆಯಲ್ಲಿ ಪದವಿ ಪೂರೈಸಿದರು. ಕರ್ನಾಟಕದ ಗದುಗಿನಲ್ಲಿ ಕೆಲಕಾಲ ಮುಖ್ಯಾಧ್ಯಾಪಕರಾಗಿದ್ದರು. ಬಳಿಕ ಎಂ.ಎ. ಪದವಿ ಪಡೆದು ಧಾರವಾಡದ ವಿಕ್ಟೋರಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಇದೇ ಸಂದರ್ಭದಲ್ಲಿ ಗೆಳೆಯರ ಬಳಗ ಎಂಬ ಸಾಹಿತ್ಯ ರಸಿಕರ ಕೂಟವನ್ನು ರಚಿಸಿದರು.

ಅಂಬಿಕಾತನಯ ದತ್ತರ ಪ್ರಮುಖ ಕೃತಿಗಳೆಂದರೆ ಕೃಷ್ಣಕುಮಾರಿ, ಗರಿ, ನಾಕುತಂತಿ, ಸಖಿಗೀತ, ನಾದಲೀಲೆ, ಉಯ್ಯಾಲೆ, ಅರಳುಮರಳು,ನಾಕುತಂತಿ, ಬಾ ಹತ್ತರ, ಸೂರ್ಯಪಾನ, ಮೂರ್ತಿಮತ್ತು ಕಾಮಕಸ್ತೂರಿ, ಹೃದಯ ಸಮುದ್ರ, ಮುಕ್ತ ಕಂಠ, ಸಂಚಯ, ಉತ್ತರಾಯಣ ಮುಂತಾದ ಕವನ ಸಂಗ್ರಹಗಳು.ಬಾಲಬೋಧೆ, ಪರಾಕಿ, ಕಾವ್ಯ ವೈಖರಿ ಮುಂತಾದ 20ಕ್ಕೂ ಅಧಿಕ ಗದ್ಯ ಬರಹ ಸಂಗ್ರಹಗಳು. ಸಾಹಿತ್ಯವಿಮರ್ಶೆ, ಸಾಹಿತ್ಯ ಸಂಶೋಧನೆ, ವಿಚಾರ ಮಂಜರಿ, ಮುಂತಾದ ಹಲವು ಸಾಹಿತ್ಯ ಗ್ರಂಥಗಳನ್ನು ರಚಿಸಿದ್ದಾರೆ.

ಬೇಂದ್ರೆಯವರಿಗೆ ಕಾಶಿಹಿಂದೂ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್, ನಾಕುತಂತಿ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿಯ ಮೂಲಕ ಸಾಹಿತ್ಯ ಕ್ಷೇತ್ರದ ಸರ್ವೋಚ್ಛ ನೆಲೆಯಲ್ಲಿ ಗುರುತಿಸಿಕೊಂಡ ಬೇಂದ್ರೆಯವರು 1981ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

ಮಾಹಿತಿ ಸಂಗ್ರಹ – ಗೂಗಲ್



## ಶಾರ್ಲೆಟ್ ನ ಸಂಗೀತ ಕಚೇರಿಗಳಿಗೆ ಮೃದಂಗದ ಮೆರುಗನ್ನು ಕೊಟ್ಟ ಮಂಜುನಾಥ ಅವರೊಂದಿಗೆ ಒಂದು ಸಂಭಾಷಣೆ : ಪ್ರಕೃತಿ ಉಪಾಧ್ಯ

ಶಾರ್ಲೆಟ್ನಲ್ಲಿ ಮೃದಂಗ ಕಲಾವಿದ ಅಂದ ಕೂಡಲೇ ಎಲ್ಲರಿಗೂ ನೆನಪಾಗುವುದು ಮಂಜು ಅನಂತ್. ಅವರ ಪೂರ್ತಿ ಹೆಸರು ಮಂಜುನಾಥ್ ಅನಂತರಾಮಯ್ಯ. ಕಳೆದ 12 ವರ್ಷಗಳಿಂದ ಶಾರ್ಲೆಟ್ ನಲ್ಲಿ ನೆಲಸಿರುವ ಮಂಜು, ಶಾರ್ಲೆಟ್ ನಲ್ಲಿ ನಡೆಯುವ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳಾದ ಪುರಂದರದಾಸ ಆರಾಧನೆ, ತ್ಯಾಗರಾಜ ಆರಾಧನೆ, ಸ್ವಾತಿ ತಿರುನಾಳ್ ಆರಾಧನೆ , ಹೀಗೆ ಹತ್ತು ಹಲವು ಕಾರ್ಯಕ್ರಮಗಳಿಗೆ ಮೃದಂಗದ ಮೆರುಗನ್ನು ನೀಡುತ್ತಿದ್ದಾರೆ. ಮಂಜು ಅವರ ಮೂಲ ನಂಜನಗೂಡು. ಅಲ್ಲಿ ಅವರು ಆದಿ ಗುರು ವಿದ್ವಾನ್ ಶ್ರೀ ಮೈಸೂರು ರಾಜಗೋಪಾಲ್ ಅವರಿಂದ ಮೃದಂಗ ಶಿಕ್ಷಣ ಪಡೆದರು. ಮೈಸೂರು ರಾಜಗೋಪಾಲ್ ಅವರು ಮೃದಂಗದ ಮೂಲಭೂತಗಳನ್ನು ಕಲಿಸಿ, ಭದ್ರ ಬುನಾದಿ ಹಾಕುತ್ತಾರೆ. ಹಾಗಾಗಿ ಸಂಗೀತ ಸಾಧನೆಯಲ್ಲಿ ಮೊದಲ ಗುರುಗಳ ಕೊಡುಗೆ ಬಹಳ ಮುಖ್ಯ ಎಂಬುದು ಮಂಜು ಅವರ ಬಲವಾದ ನಂಬಿಕೆ. ಮಂಜು ಅವರು ಮೈಸೂರಿನಲ್ಲಿ ಇಂಜಿನಿಯರಿಂಗ್ ಮಾಡಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಐಐಟಿ ಕರಗ್ ಪುರಕ್ಕೆ ತೆರಳಿದರು. ಅಲ್ಲಿ ಅವರಿಗೆ SPDC-MACAY ಎಂಬ ಸಂಗೀತ ಸಂಘಟನೆಯ ಪರಿಚಯವಾಯಿತು ಹಾಗೂ ಪ್ರಸಿದ್ಧ ಹಿಂದುಸ್ತಾನಿ ಗಾಯಕ ಪಂಡಿತ್ ಬುದ್ಧ ದೇವ ದಾಸ್ ಗುಪ್ತ ಅವರ ಸಂಗೀತವನ್ನು ಕೇಳುವ ಅವಕಾಶ ಸಿಕ್ಕಿತು. ಆದಾದ ಮೇಲೆ ಕೆಲಸದ ನಿಮಿತ್ತ ಶಾರ್ಲೆಟ್ ಬಂದಾಗ ಕರ್ನಾಟಿಕ್ ಸಂಗೀತದ ಪುನರ್ಮಿಲನವಾಯಿತು. ಹಾಗೆಯೇ ಸದಾಶಿವ ಭಟ್ ಉಂಕಳೆ ಮತ್ತು ದೇವರನಾಮ ಸಂಘದ ಪರಿಚಯವಾಯಿತು. ಕಲಿಕೆಯ ವಿಚಾರ ಬಂದಾಗ ಇವರು ಸಂಗೀತ ವಿದ್ವಾನ್ ಗಳು ಅನುಸರಿಸುವ "ಸ್ವಾಧ್ಯಾಯ" ಎಂಬ ನಿರಂತರ ವಿದ್ಯಾಭ್ಯಾಸ ಪದ್ಧತಿಯನ್ನು ಇಷ್ಟ ಪಡುತ್ತಾರೆ. ಇಂಟರ್ನೆಟ್ ಯುಗದಲ್ಲಿ ಸಂಗೀತ ಜ್ಞಾನಾರ್ಜನೆಗೆ ಹಲವಾರು ಅವಕಾಶ ಇರುವುದರಿಂದ ಮಂಜು ಅವರು ಹಾಸ್ಯವಾಗಿ "ಇಂಟರ್ನೆಟ್ ಗುರುವೇ ನಮಃ" ಎಂದು ಹೇಳುತ್ತಾರೆ. ಸಂಗೀತಕ್ಕಾಗಿ ನಿಸ್ವಾರ್ಥ ಸೇವೆ ಸಲಿಸುತ್ತಿರುವ ಹಾಗೂ ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಶ್ರಮಿಸುತ್ತಿರುವ ಮಂಜುನಾಥ್ ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.







## ಶಾರ್ಲೆಟ್ ನ ಸಂಗೀತ ಕಚೇರಿಗಳಿಗೆ ಮೃದಂಗದ ಮೆರುಗನ್ನು ಕೊಟ್ಟ ಮಂಜುನಾಥ ಅವರೊಂದಿಗೆ ಒಂದು ಸಂಭಾಷಣೆ : ಪ್ರಕೃತಿ ಉಪಾಧ್ಯ

ಪ್ರಶ್ನೆ: ನಿಮಗೆ ಸಂಗೀತದಲ್ಲಿ ಆಸಕ್ತಿ ಯಾವಾಗ ಶುರು ಆಯಿತು?

**ಉತ್ತರ:** ನನಗೆ ಸಂಗೀತದಲ್ಲಿ ಮೊದಲಿನಿಂದಲೂ ಆಸಕ್ತಿ ಇತ್ತು. ನಮ್ಮ ಅಮ್ಮ ದೇವರನಾಮ ಹಾಡುತ್ತಾ ಇದ್ರು. ದೇವರನಾಮದಿಂದನೆ ನನ್ನ ಸಂಗೀತದ ಜರ್ನಿ ಶುರು ಆಯಿತು. ಹಾಗೇನೆ ಭಾವಗೀತೆ, ಸಿನಿಮಾ ಹಾಡು ಹಾಡಿಕೊಂಡು ಬಂದೆ. ಆದ್ರೆ ಮೃದಂಗ ಅಂತ ಕೇಳೋದಾದ್ರೆ, ನಾನು ಚಿಕ್ಕವನಿದ್ದಾಗ ನಮ್ಮ ಮನೇಲಿ ಒಂದು ಹಳೇ ಮಂಚ ಇತ್ತು. ರೇಡಿಯೋದಲ್ಲಿ ಯಾವಾಗಲು ಸಿನಿಮಾ ಹಾಡು ಬಂದಾಗ ಆ ಹಾಡಿಗೆ ಟಕ ಟಕ ಅಂತ ಮಂಚನ ಕುಟ್ಟುತ್ತ ಇದ್ದೆ. ಯಾವಾಗ್ಲೂ ಮಂಚ ಕುಟ್ಟುತ್ತಾನೆ ಅಂತ ನಮ್ಮ ಅಮ್ಮ ತಬಲಾ ಕ್ಲಾಸ್ಗೆ ಹಾಕಲು ಅಪ್ಪನಿಗೆ ಹೇಳಿದ್ರು.ಊರಲ್ಲಿ ತಬಲಾ ಹೇಳಿಕೊಡುವವರು ಯಾರು ಇರಲಿಲ್ಲ ಹಾಗಾಗಿ ಮೃದಂಗ ಕ್ಲಾಸ್ ಗೆ ಹಾಕಿದರು. ಹಾಗೆ ಶುರುವಾಯ್ತು ನನ್ನ ಮೃದಂಗದ ಪಯಣ.

**ಪ್ರಶ್ನೆ:** ನಿಮಗೆ ಮೃದಂಗ ಹೇಳಿಕೊಟ್ಟಿದ್ದು ಯಾರು?

**ಉತ್ತರ:** ನನ್ನ ಆದಿ ಗುರುಗಳು, ನನಗೆ ಫೌಂಡೇಶನ್ ಹಾಕಿದ್ದು ಮೈಸೂರು ರಾಜಗೋಪಾಲ್. ಅವರ ಹತ್ರ ೨ ವರ್ಷ ಕಲಿತಿದ್ದೆ. ಆಮೇಲೆ ಸ್ವಲ್ಪ ಬ್ರೇಕ್ ತಗೊಂಡೆ. ಅದಾದ ನಂತರ ಬಿ.ಅರ್. ರಮೇಶ್ , ತುಮಕೂರು ರವಿಶಂಕರ್ ಹತ್ರ ಕಲಿತಿದ್ದೆ.

**ಪ್ರಶ್ನೆ**: ಸಂಗೀತ ಮತ್ತು ಮೃದಂಗದಲ್ಲಿ ಎರಡರಲ್ಲೂ ನಿಮಗೆ ಇಷ್ಟವಾದ ಮ್ಯೂಸಿಷಿಯನ್ ಯಾರು?

**ಉತ್ತರ:** ನನಗೆ ಬಾಲಮುರಳಿ ಕೃಷ್ಣ ಮತ್ತು ಮಹಾರಾಜಪುರ ಸಂತಾನಂ ಇಬ್ಬರು ಇಷ್ಟ. ಸಂತಾನಂ ಅವರು ಹಾಡೋದೆಲ್ಲ ಡಿವೈನ್. ಅವರು ಹಾಡೋ ಸ್ಟೈಲೇ ಬೇರೆ, ಡೆಪ್ತ್ ಬೇರೆ. ಮೆಲೋಡಿಯಸ್ ಕ್ವಾಲಿಟಿ, ಎಂಜಾಯ್ ಮಾಡಬೇಕು ಅಂದ್ರೆ ಬಾಲಮುರಳಿಕೃಷ್ಣ ಅವರು ಬೆಸ್ಟ್. ಲಯವಾದ್ಯ ಅಂತ ನೋಡೋಕೆ ಹೋದ್ರೆ, ನನಗೆ ತುಮಕೂರು ರವಿಶಂಕರ್ ಇಷ್ಟ. ಈ ಜನರೇಶನಲ್ಲಿ ಪತ್ರಿ ಸತೀಶ್ ಕುಮಾರ್ ಇಷ್ಟ. ಅವರಿಗೆ ತುಂಬಾ ವಿದ್ವತ್ ಇದೆ. ಬರೀ ಲಯ ಜ್ಞಾನ ಅಂತ ನೋಡೋಕೆ ಹೋದ್ರೆ ಉಮಯಾಳಪುರಮ್ ಶಿವರಾಮಾನ್ ಅವರನ್ನು ಇಷ್ಟ ಪಡುತೀನಿ. ಯಾಕೆಂದ್ರೆ ಅವರ ಅಪ್ರೋಚ್ ಚೆನ್ನಾಗಿದೆ. ಅವರು ಒಬ್ಬ ನಡೆದಾಡುವ ವಿಶ್ವಕೋಶ. How do you describe mridangam ಅಂತ ಕೇಳಿದ್ರೆ “mridangam should repeat or should closely play(sing) what the singer is singing”? 65 ವರ್ಷ ಕಚೇರಿಯ ಅನುಭವ ಇರುವವರಿಗೆ ಮಾತ್ರ ಈ ಮಾತನ್ನು ಹೇಳೋಕೆ ಆಗುತ್ತೆ. ಅವರು ಹೇಳುತಾರೆ “ A mridangist is successful if he became a superstore in America”. ಅಂದ್ರೆ as a mridangist ನಿಮ್ಮ ಹತ್ರ ಯಾರೇ ಬಂದ್ರು, ಅವರು ಏನೇ ಹಾಡಿದ್ರೂ ಅದಕ್ಕೆ ನುಡಿಸೋಕೆ ಬರಬೇಕು.

**ಪ್ರಶ್ನೆ**: ನೀವು ಮೃದಂಗ ಯಾವಾಗ ಕಲಿಯೋಕೆ ಶುರು ಮಾಡಿದ್ರಿ?

**ಉತ್ತರ**: ನಾನು ಮೃದಂಗ ಕಲಿಯುವಾಗ ನನಗೆ 14-15 ವರ್ಷ ಆಗಿತ್ತು.

**ಪ್ರಶ್ನೆ**: ನಿಮಗೆ ಹಾಡೋದು ಇಷ್ಟನಾ ಅಥವಾ ಮೃದಂಗ ನುಡಿಸೋದು ಇಷ್ಟನಾ?

**ಉತ್ತರ:** ನಾನು ಯಾವುದನ್ನೂ ಬೇಡ ಅಂತ ಹೇಳೋದಿಲ್ಲ. Life ನಲ್ಲಿ ಏನೆ ಬಂದರೂ explore ಮಾಡುತೀನಿ. ನನಗೆ ಯಾರಾದ್ರು ಹಾಡುತ್ತಾ ಇದ್ರೆ ಮೃದಂಗ ನುಡಿಸೋಕೆ ಖುಷಿಯಾಗುತ್ತೆ.

ಪ್ರಶ್ನೆ: ನೀವು ಯಾರಿಗಾದ್ರೂ ಮೃದಂಗ ಹೇಳಿಕೊಡುತ್ತಿದ್ದೀರಾ?

**ಉತ್ತರ:** ನಾನು ಸುಮಾರು ಜನಕ್ಕೆ ಹೇಳಿಕೊಟ್ಟಿದ್ದೇನೆ. ಈಗ 3 ಜನ ವಿದ್ಯಾರ್ಥಿಗಳಿದ್ದಾರೆ. ಕೆಲವು ಮಕ್ಕಳು ಕಾಲೇಜಿಗೆ ಹೋದ್ರು. ಮೃದಂಗ ಜರ್ನಿ ಅಂತಂದ್ರೆ ಸಂಗೀತ ಜರ್ನಿಗಿಂತ ಭಿನ್ನ. ಸಂಗೀತ ಕಲಿತ್ರೆ, ಅದರಲ್ಲಿ ರಾಗ ಇದೆ ಭಾವ ಇದೆ. ಅದು ಒಂದು encouraging journey. ಆದ್ರೆ ಮೃದಂಗ ಡ್ರೈ ಜರ್ನಿ.ಹಾಡುಗಳನ್ನು ನುಡಿಸೋವರೆಗೆ it's very discouraging ಮತ್ತು challenging. ಮಕ್ಕಳು ಬೇಗ ಆಸಕ್ತಿ ಕಳೆದುಕೊಳ್ಳುತ್ತಾರೆ.

## ಶಾರ್ಲೆಟ್ ನ ಸಂಗೀತ ಕಚೇರಿಗಳಿಗೆ ಮೃದಂಗದ ಮೆರುಗನ್ನು ಕೊಟ್ಟ ಮಂಜುನಾಥ ಅವರೊಂದಿಗೆ ಒಂದು ಸಂಭಾಷಣೆ : ಪ್ರಕೃತಿ ಉಪಾಧ್ಯ

**ಪ್ರಶ್ನೆ**: ಪುರಂದರದಾಸ ಆರಾಧನೆ, ತ್ಯಾಗರಾಜ ಆರಾಧನೆ ಮತ್ತು ಹೀಗೆ ಶಾರ್ಲೆಟ್ ನ ಹಲವು ಕಾರ್ಯಕ್ರಮಗಳಿಗೆ ಮೃದಂಗ ನುಡಿಸುತ್ತೀರಿ. ಇದನ್ನು ಎಷ್ಟು ವರ್ಷಗಳಿಂದ ಮಾಡುತ ಇದೀರಾ?

**ಉತ್ತರ**: ಸುಮಾರು ಇಸವಿ 2009 ರಿಂದ ಶುರು ಮಾಡಿದೆ. ನಾನು ಶಾರ್ಲೆಟ್ ಬಂದಾಗ ನನ್ನ ಹತ್ರ ಮೃದಂಗ ಇರಲಿಲ್ಲ. ನಾನು ದೇವರನಾಮ ಗ್ರೂಪ್ನಲ್ಲಿ ಹಾಡುತ ಇದ್ದೆ. ನಾನು ಸಂಗೀತ ರಾವ್ ಮತ್ತು ಸದಾಶಿವ್ ಭಟ್ ಅಂಕಲ್ ಗೆ ಧನ್ಯವಾದ ಹೇಳೋಕೆ ಇಷ್ಟ ಪಡುತೀನಿ. ಅವರು ನನಗೆ ಉತ್ತೇಜನ ನೀಡಿ, ನಾನು 2008 ರಲ್ಲಿ ನನ್ನ ತಂದೆ ಕೊಡಿಸಿದ ಮೃದಂಗವನ್ನು ಭಾರತದಿಂದ ತಂದೆ. ಹೀಗೆ ಶಾರ್ಲೆಟ್ ನಲ್ಲಿ ಕಳೆದ 9 ವರ್ಷ ದಿಂದ ನಾನು ಸಂಗೀತ ಸೇವೆಯನ್ನು ಮಾಡುತ ಇದ್ದೀನಿ.

**ಪ್ರಶ್ನೆ**: ಮೃದಂಗ ಅಲ್ಲದೆ ಇನ್ನಾವುದಾದರೂ ಇನ್ಸ್ಟ್ರುಮೆಂಟ್ ಕಲಿತಿದ್ದೀರಾ?

**ಉತ್ತರ**: ಶಾಸ್ತ್ರೀಯವಾಗಿ ಬೇರೆ ಇನ್ಸ್ಟ್ರುಮೆಂಟ್ ಕಲಿತಿಲ್ಲ. ಜಾತ್ರೆಯಲ್ಲಿ ಸಿಗುವ ಕೊಳಲು ತಂದು, ಮೇಲ್ಗಡೆ ಮನೆಯವರ ಹತ್ರ ಸ್ವಲ್ಪ ಕಲಿತಿದ್ದೀನಿ. ಹೀಗೆ ಸಣ್ಣ ಸಣ್ಣ ಪ್ರಯತ್ನ ಮಾಡಿದ್ದೀನಿ.

**ಪ್ರಶ್ನೆ**: ನಿಮಗೆ ಬೇರೆ ಯಾವ ಯಾವ ಹವ್ಯಾಸವಿದೆ?

**ಉತ್ತರ**: ತುಂಬಾ ಹವ್ಯಾಸಗಳಿವೆ. ಮೃದಂಗವೇ ನನ್ನ ಮುಖ್ಯ ಹವ್ಯಾಸ.ಅದು ಬಿಟ್ಟರೆ, ಮೊದಲೆಲ್ಲಾ ಮಂತ್ರ ಹೇಳೋ ಹವ್ಯಾಸ ಇತ್ತು. ನನಗೆ ಸೋಶಿಯಲ್ ಆಕ್ಟಿವಿಟಿಯಲ್ಲಿ ಕೂಡ ಆಸಕ್ತಿ ಇದೆ. ಕನ್ನಡ ಸಂಘ ಮತ್ತು ಹಲವು ಕಡೆ ನನ್ನನ್ನು ನಾನು ತೊಡಗಿಸಿ ಕೊಂಡಿದ್ದೇನೆ. ಜೊತೆಗೆ ಹಾಡೋದು ಕೂಡ ನನಗೆ ಇಷ್ಟ.

**ಪ್ರಶ್ನೆ:** ಸಂಗೀತದ ಬಗ್ಗೆ ನಿಮ್ಮ ಮುಂದಿನ ಯೋಚನೆ ಏನು?

ಉತ್ತರ: ನನ್ನ ವಿದ್ಯಾರ್ಥಿಗಳನ್ನು ತಯಾರಿ ಮಾಡಿ ಆರಾಧನೆ ಸಮಯದಲ್ಲಿ ಅವರು ಮೃದಂಗವನ್ನು ನುಡಿಸಬೇಕು. ನಾನು ಕಲಿತ ಈ ಕಲೆಯನ್ನು ಮುಂದಿನ ಪೀಳಿಗೆಗಳಿಗೆ ಸಾಗಿಸಬೇಕು. ಶಾರ್ಲೆಟ್ಲಿನ್ನಲ್ಲಿ ಒಂದು ecosystem ಮಾಡಬೇಕು. ಸಣ್ಣ ಸಣ್ಣ_ಕಚೇರಿಗಳನ್ನು ಮಾಡಿ ಹೊಸ ಹೊಸ ಆರ್ಟಿಸ್ಟ್ ಗಳಿಗೆ, ಮಕ್ಕಳಿಗೆ(ವಿದ್ಯಾರ್ಥಿ)ಅವಕಾಶ ಮಾಡಿಕೊಡಬೇಕು. ಇದರಿಂದ ಮಕ್ಕಳಿಗೆ ಒಂದು ಆತ್ಮವಿಶ್ವಾಸ ಬರುತ್ತೆ, ಕಲಿಯೋಕೆ ಒಂದು ಹುಮ್ಮಸ್ಸು ಸಿಗುತ್ತೆ. ಈ ಸಿಸ್ಟಮ್ ನ ಶುರು ಮಾಡಬೇಕು ಮತ್ತು ಅದನ್ನ ಬೆಳೆಸಬೇಕು.

**ಪ್ರಶ್ನೆ:** ಸಂಗೀತದ ಬಗ್ಗೆ ನಮ್ಮ ಕನ್ನಡ ಕ್ಲಾಸ್ ಮಕ್ಕಳಿಗೆ ಏನಾದ್ರೂ ಹೇಳಿ.

**ಉತ್ತರ:** ಸಂಗೀತ ತುಂಬಾ ಮಹತ್ವದ ವಸ್ತು ಯಾಕೆಂದರೆ ಅದು ಸಂಸ್ಕೃತಿಗೆ ಸಂಬಂಧಿಸಿದ್ದು. ಸ್ಕೂಲ್ಲಲ್ಲಿ ಕಲಿಯೋ ವಿದ್ಯೆ ಹೊಟ್ಟೆಪಾಡಿನ ವಿದ್ಯೆ.ಅವೂ ಬೇಕು. ಹಾಗೇನೆ ಒಂದು ಮಗು ಬೆಳೆದು ದೊಡ್ಡವಾಗುವಾಗ ಸ್ಕೂಲ್ನಲ್ಲಿ ಕಲಿಯುವ ಶೈಕ್ಷಣಿಕ ವಿದ್ಯಾಭ್ಯಾಸ, ಸಾಂಸ್ಕೃತಿಕ(cultural) ವಿದ್ಯಾಭ್ಯಾಸ, ಆರ್ಟ್ಸ್ ಮಾಡಬೇಕು, ಇತಿಹಾಸ(history) ಕಲಿಬೇಕು, ಸ್ಪೋರ್ಟ್ಸ್ (physical education)ಆಡಬೇಕು, ಎಲ್ಲದೂ ಮಾಡಬೇಕು. ಅದೇ ಸಮಗ್ರ ವಿದ್ಯಾಭ್ಯಾಸ. ಸಂಗೀತ feminine aspect of the life. ಅದು ಜೀವನಕ್ಕೆ ಒಂದು ಅರ್ಥ ಕೊಡುತ್ತದೆ. ಸಂಗೀತವನ್ನು ತುಂಬಾ ಗಂಭಿರವಾಗಿ ತಗೊಂಡ್ರೆ ಅದು ನಾದ ಯೋಗ. ಲಘುವಾಗಿ ತಗೊಂಡ್ರೆ ಅದು ಒಂದು ಕಲ್ಚರಲ್ ಎಜುಕೇಶನ್. ಭಾರತೀಯ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಇದು ಒಂದು ಮಾಧ್ಯಮ ಕೂಡ. ಮಕ್ಕಳೇ, ಸಂಗೀತವನ್ನು ಕಲಿಯಿರಿ. ಒಂದು ಕಾನ್ಸರ್ಟ್ level ವರೆಗೆ ಕಲಿತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ.

**ಪ್ರಶ್ನೆ:** ನಮ್ಮ ಕನ್ನಡ ಕ್ಲಾಸ್ ಮಕ್ಕಳಿಗೆ ಕನ್ನಡ ಯಾಕೆ ಕಲೀಬೇಕು ಮತ್ತು ಕನ್ನಡದಲ್ಲಿ ಯಾಕೆ ಮಾತಾಡಬೇಕು ಅಂತ ಹೇಳ್ತೀರಾ?

**ಉತ್ತರ**: ಖಂಡಿತಾ.ಅಮೇರಿಕಾದಲ್ಲಿ ಬೆಳಿತಿದೀರಾ ಇಲ್ಲಿನ ಸಂಸ್ಕೃತಿ ಧಾರಳವಾಗಿ ಬರುತ್ತೆ. ಆದ್ರೆ ನಿಮ್ಮ ಮೂಲ ಸಂಸ್ಕೃತಿ ಯನ್ನ ಕಲಿಯೋದಕ್ಕೆ ಮಾತೃಭಾಷೆ ಬೆಸ್ಟ್. ಕನ್ನಡ ಕಲಿತ್ರೆ ಕನ್ನಡದ ಜೊತೆ ಕನ್ನಡ ಸಂಸ್ಕೃತಿನ ಕಲಿತೀರ. ಕನ್ನಡ ಇತಿಹಾಸ ತಿಳಿದುಕೊಳ್ಳುತ್ತೀರ. ಕನ್ನಡ ಮಾತಾಡಿದ್ರಿಂದ ನಮ್ಮ ಸಂಸ್ಕೃತಿನ ಉಳಿಸುತ್ತೀರ ಮತ್ತು ಬೆಳೆಸುತ್ತೀರ.








**ಅಜ್ಜ, ಅಜ್ಜಿ, ಅತ್ತೆ, ಮಾವನ ಜೊತೆ ಕಳೆದ summer holidays: ಅದಿತ್ ಕುಮಾರ್**

ನಮ್ಮ ಅಜ್ಜ ಅಜ್ಜಿ ಅತ್ತೆ ಮಾವ ಎಲ್ಲರೂ ಇಂಡಿಯಾ ಇಂದ ನಮ್ಮನ್ನು ವಿಸಿಟ್ ಮಾಡಲಿಕ್ಕೆ ಇಲ್ಲಿ ಬಂದಿದ್ರು. ಅವರು first ಕ್ಯಾಲಿಫೋರ್ನಿಯಾ ಹೋಗಿ, ಅಲ್ಲಿ ಎಲ್ಲ ಜಾಗಗಳನ್ನು visit ಮಾಡಿ ನಂತರ ನಮ್ಮ ಮನೆಗೆ ಬಂದಿದ್ದರು. ಅವರು ಬಂದು ಒಂದು ತಿಂಗಳು ನಮ್ಮ ಮನೆಯಲ್ಲಿ ನಮ್ಮ ಜೊತೆಗೆ ಇದ್ದರು. ನಾನು ಮತ್ತು ಆದ್ಯ, ಅತ್ತೆ, ಮಾವ, ಅಜ್ಜ, ಅಜ್ಜಿಯ ಜೊತೆ ಯಾವಾಗಲೂ ಆಡುತ್ತಾ ಇದ್ವಿ. ನಾವೆಲ್ಲರೂ ಅಟ್ಲಾಂಟ, ರೂಬಿ ಫಾಲ್ಸ್, blue ridge mountain, Grandfather mountain hanging bridge ಎಲ್ಲ ಕಡೆ ಹೋಗಿದ್ವಿ. ಅವರು ನಮ್ಮ ಜೊತೆಗೆ ಇದ್ದಾಗ ಡೇಸ್ ತುಂಬಾ ಫಾಸ್ಟ್ ಆಗಿ ಹೋಗ್ತಾ ಇತ್ತು. ಒಂದು ತಿಂಗಳು ಕಳೆದದ್ದು ಗೊತ್ತಾಗಲೇ ಇಲ್ಲ ಅವರ ಜೊತೆ ಇದ್ದದ್ದು ತುಂಬಾ ಖುಷಿ ಆಯಿತು. ಅವರನ್ನು ನಾನು airportಗೆ ಬಿಡಲಿಕ್ಕೆ ಹೋದಾಗ ನಾವೆಲ್ಲರೂ ಅತ್ತು ಬಿಟ್ಟೆವು. ಅವರು ಕೂಡ ಅತ್ತು ಬಿಟ್ಟರು. ನಾನು ಈಗ ಅವರೆಲ್ಲರನ್ನೂ ತುಂಬಾ ಮಿಸ್ ಮಾಡ್ಕೋತಾ ಇದ್ದೀನಿ. Summer holidays ನಲ್ಲಿ ನಾನು ಅವರನ್ನು visit ಮಾಡೋಕೆ ಇಂಡಿಯಾ ಹೋಗುತೀನಿ.





# ಚಿಣ್ಣರ ಚಿತ್ತಾರ






















## ನಾ ಓದಿದ ಕತೆ : ಶರಣ್

ನನ್ನ ಅಮ್ಮ ಮಲಗುವ ಮುಂಚೆ ಪ್ರತಿದಿನ ಅನೇಕ ನೀತಿ ಕಥೆಗಳನ್ನು ಹೇಳುತ್ತಾರೆ. ಅದರಲ್ಲಿ ಇದು ಒಂದು. ಒಂದಾನೊಂದು ಕಾಲದಲ್ಲಿ ಮೂರು ಪುಟಾಣಿ ನಾಯಿಮರಿಗಳು ವಾಸಿಸುತಿದ್ದವು, ಮೊದಲ ಎರಡು ನಾಯಿಮರಿಗಳು ಬಹಳ ಸೋಮಾರಿಯಾಗಿದ್ದವು. ಇಡೀ ದಿನ ಆಟ ಆಡುತ್ತಾ ಕಾಲ ಕಳೆಯುತಿದ್ದವು. ಆದರೆ ಮೂರನೇ ನಾಯಿಮರಿ ಬಹಳ ಚುರುಕಾಗಿ ಕಷ್ಟಪಟ್ಟು ಕೆಲಸ ಮಾಡುತ್ತಿತ್ತು. ಒಂದು ದಿನ ಮೂರೂ ನಾಯಿಮರಿಗಳು ಒಂದೊಂದು ಮನೆಯನ್ನು ಕಟ್ಟಿಕೊಳ್ಳಲು ನಿರ್ಧರಿಸಿದವು.

ಮನೆಕಟ್ಟುತ್ತಾ ಸಮಯ ಹಾಳುಮಾಡುವುದು ಮೊದಲನೆ ನಾಯಿಮರಿಗೆ ಇಷ್ಟವಿರಲಿಲ್ಲ. ಅದು ಹೇಳಿತು “ನಾನು ನನ್ನ ಮನೆಯನ್ನು ಹುಲ್ಲಿನಿಂದ ಕಟ್ಟುತ್ತೇನೆ. ಅದು ಸುಲಭದ ಕೆಲಸ”.  ಎರಡನೇ ನಾಯಿಮರಿಗೂ ಕಷ್ಟಪಟ್ಟು ಮನೆ ಕಟ್ಟುವುದು ಇಷ್ಟವಿರಲಿಲ್ಲ. ಅದು ಹೇಳಿತು “ನನ್ನ ಮನೆಯನ್ನು ಕಡ್ಡಿಗಳಿಂದ ಕಟ್ಟುತ್ತೇನೆ”. ಹುಲ್ಲಿನ ಮನೆಯ ಪಕ್ಕದಲ್ಲಿ ಕಡ್ಡಿಗಳಿಂದ ಅದು ಮನೆ ಕಟ್ಟಿತು. ತನ್ನ ಇಬ್ಬರು ಅಣ್ಣಂದಿರು ಮೂರ್ಖರಾಗಿ ಮನೆ ಕಟ್ಟಿದ್ದನ್ನು ಮೂರನೇ ನಾಯಿಮರಿ ಗಮನಿಸಿತು. ನನ್ನ ಮನೆ ಬಲವಾಗಿರಬೇಕು ಎಂದು ಇಟ್ಟಿಗೆಯಿಂದ ಕಷ್ಟಪಟ್ಟು ಕಟ್ಟಿತು.

ಹೀಗೆ ಮೂರನೇ ನಾಯಿಮರಿ ತನ್ನ ಮನೆಯನ್ನು ಕಟ್ಟಲು ಕಷ್ಟ ಪಡುತ್ತಿದ್ದಾಗ ಉಳಿದ ಎರಡು ನಾಯಿಮರಿಗಳು ಆಟವಾಡುತ್ತಾ, ಮೋಜು ಮಾಡುತ್ತಾ ಸಮಯ ಕಳೆದವು.

ಒಂದು ದಿನ ತುಂಬ ಗಾಳಿ, ಮಳೆ ಪ್ರಾರಂಭವಾಯಿತು. ಆಗ ಮೂರೂ ನಾಯಿಮರಿಗಳು ತಮ್ಮ ಹೊಸದಾಗಿ ನಿರ್ಮಿಸಿದ ಮನೆಯಲ್ಲಿ ವಾಸವಾಗಿದ್ದವು. ಆ ಮಳೆಯ ರಭಸಕ್ಕೆ ಹುಲ್ಲಿನಿಂದ ಹಾಗು ಕಡ್ಡಿಯಿಂದ ಕಟ್ಟಿದ ಮನೆಗಳು ನಾಶವಾದವು. ಆಗ ನಾಯಿಮರಿಗಳಿಗೆ ಯಾವುದೇ ರೀತಿಯಾಗಿ ಮಳೆಯಿಂದ ರಕ್ಷಣೆ ದೊರೆಯಲಿಲ್ಲ. ಆಗ ಮೂರನೇ ನಾಯಿಮರಿಯತ್ತ ಆಶ್ರಯಕ್ಕಾಗಿ ಹೋದವು. ಮೂರನೇ ನಾಯಿಮರಿ ಕಷ್ಟಪಟ್ಟು ಕಟ್ಟಿದ ಮನೆ ಗಾಳಿಯಿಂದ ಮತ್ತು ಮಳೆಯಿಂದ ಯಾವುದೇ ಹಾನಿಯಾಗಲಿಲ್ಲ. ಮೊದಲ ಎರಡು ನಾಯಿಮರಿಗಳು ಮೂರನೆಯ ನಾಯಿಮರಿಯಿಂದ ಆಶ್ರಯ ಪಡೆದುಕೊಂಡು ಜೀವನ ನಡೆಸಿದವು.

**ನೀತಿ: “ಕಷ್ಟಪಟ್ಟು ದುಡಿದಾಗ ಜೀವನದ್ಲಲಿ ಸುಖದೊರೆಯುತ್ತದೆ.” ಅಥವಾ “ಕೈಕೆಸರಾದರೆ ಬಾಯಿ ಮೊಸರು.”**

## ಜೋಕ್ಸ್ : ಸೋಹಾನ್




ಗುಂಡ : ನಾನು ಮಾಡದೆ ಇರುವ ಕೆಲಸಕ್ಕೆ ನನಗೆ ಶಿಕ್ಷೆ ಕೊಡುತ್ತೀರಾ ಮೇಡಮ್?
ಟೀಚರ್: ಮಾಡದೆ ಇರುವ ಕೆಲಸಕ್ಕೆ ಏಕೆ ಶಿಕ್ಷೆ ಕೊಡಲಿ? ಕೊಡೋದಿಲ್ಲ.
ಗುಂಡ: ನಾನಿವತ್ತು ಹೊಮ್ ವರ್ಕ್ ಮಾಡಿಲ್ಲ, ಮೇಡಂ!

## ಡಿಸೆಂಬರ್ ಜನ್ಮದಿನಗಳು

- ರಜನಿಕಾಂತ್ - 12-ಡಿಸೆಂಬರ್-1950
- ದಿಗಂತ್ - 28-ಡಿಸೆಂಬರ್-1984
- ಕುಂದಾಪುರ ವಾಮನ್ ಕಾಮತ್ - 02-ಡಿಸೆಂಬರ್ -1947
- ಅಲಿ ಬೊಂಗೊ - 08-ಡಿಸೆಂಬರ್ -1929
- ನಾರಾಯಣ್ ಸಿಂಗ್ ಧರಮ್ ಸಿಂಗ್ - 25-ಡಿಸೆಂಬರ್ -1936
- ಡಾ. ಆರ್. ಗಣೇಶ್ - 04-ಡಿಸೆಂಬರ್ -1962
- ಶ್ರೀಧರ್ ಸ್ವಾಮಿ - 07-ಡಿಸೆಂಬರ್-1908
- ಕನ್ನೂರ್ ಮಂಜುನಾಥ ಚಾನಪ್ಪ - 02-ಡಿಸೆಂಬರ್ -1954
- ಬಸಂಗೌಡ ಪಾಟೀಲ್ - 13-ಡಿಸೆಂಬರ್ -1963
- ತೇಜಸ್ವಿನಿ ಪ್ರಕಾಶ್ - 17-ಡಿಸೆಂಬರ್-1987



## ನಾ ಕಂಡ ಸಿನಿಮಾ "ಕವಿರತ್ನ ಕಾಳಿದಾಸ": ಪ್ರಮಿತಿ ಉಪಾಧ್ಯ




ನೀವು ಕವಿರತ್ನ ಕಾಳಿದಾಸ ಸಿನೆಮಾ ನೋಡಿದ್ದೀರಾ? ಆಗಸ್ಟ್ ಸಂಚಿಕೆದಲ್ಲಿ ಮೂರ್ತಿತಾತ ಬರೆದ ಪತ್ರ ಓದಿ, ನನಗೆ ಮತ್ತು ಅಕ್ಕನಿಗೆ ಈ ಸಿನೆಮಾ ನೋಡೋಕೆ ಆಸೆ ಆಯಿತು. ಈ ಸಿನೆಮಾ ಕಾಳಿದಾಸ ಒಬ್ಬ ಮಹಾಕವಿ ಅಂತ ತಿಳಿಸುತ್ತೆ. ಡಾ. ರಾಜ್ ಕುಮಾರ್ (ಕಾಳಿದಾಸ) ಮತ್ತು ಜಯಪ್ರದ (ವಿದ್ಯಾಧರೆ) ಮುಖ್ಯ ಪಾತ್ರದಲ್ಲಿ ಅಭಿನಯಸಿದ್ದಾರೆ. ಈ ಸಿನೆಮಾವನ್ನು ರೇಣುಕಾಶರ್ಮ ನಿರ್ದೇಶಿಸಿದ್ದಾರೆ. ರಾಜಕುಮಾರಿ ವಿದ್ಯಾಧರೆಗೆ ಮದುವೆ ಮಾಡುವ ಸಮಯದಲ್ಲಿ ಮೋಸದಿಂದ ಅವಳಿಗೆ ಕುರುಬನೊಂದಿಗೆ ಮದುವೆ ಮಾಡುತ್ತಾರೆ. ವಿಧ್ಯಾಧರೆ ಕುರುಬನನ್ನು ಹೇಗೆ ಕಾಳಿದಾಸನನ್ನಾಗಿ ಮಾಡುತ್ತಾಳೆ, ಕಾಳಿದಾಸನ ಮುಂದಿನ ಜೀವನ ಹೇಗಿರುತ್ತೆ ಮತ್ತು ಕಾಳಿದಾಸ ಹೇಗೆ ಅಭಿಜ್ಞಾನ ಶಾಕುಂತಲೆ ನಾಟಕವನ್ನು ಬರೆದ ಎಂದು ತಿಳಿಯಲು ನೀವು ನೋಡಲೇಬೇಕು "ಕವಿರತ್ನ ಕಾಳಿದಾಸ" ಸಿನಿಮಾ. ಈ ಚಿತ್ರದಲ್ಲಿ ಬಹಳಷ್ಟು ಸುಂದರ ಹಾಡುಗಳಿವೆ. ಕಾಳಿದಾಸನು ಕಾಳಿ ದೇವಿಯನ್ನು ಹೊಗಳಿ ಹಾಡುವ "ಮಾಣಿಕ್ಯ ವೀಣಾ" ನನಗೆ ಇಷ್ಟವಾದ ಹಾಡು. ಈ ಹಾಡನ್ನು ಡಾ. ರಾಜ್ ಕುಮಾರ್ ಹಾಡಿದ್ದಾರೆ. ತಪ್ಪದೆ ಎಲ್ಲರೂ ಸೇರಿ ನೋಡಿ " ಕವಿರತ್ನ ಕಾಳಿದಾಸ " ಸಿನಿಮಾ.

## ನುಡಿಮುತ್ತು :

೧. **ಪೃಥಿವ್ಯಾಂ ತ್ರೀಣಿ ರತ್ನಾನಿ ಜಲಮನ್ನಂ ಸುಭಾಷಿತಂ/**
**ಮೂಢೈಃ ಪಾಷಾಣಖಂಡೇಷು ರತ್ನಸಂಜ್ಞಾ ವಿಧೀಯತೇ//**

**'ಭೂಮಿಯಲ್ಲಿ ಶ್ರೇಷ್ಠವಸ್ತುಗಳೆಂದರೆ ಕೇವಲ ಮೂರು: ನೀರು, ಅನ್ನ ಮತ್ತು ಒಳ್ಳೆಯ ಮಾತು.**
**ಆದರೆ ಮೂರ್ಖರು ಕಲ್ಲಿನ ಚೂರುಗಳನ್ನು "ರತ್ನ "ಎಂದು ಕರೆಯುತ್ತಿರುವುದು ವಿಷಾದಕರ.**

**ಸುಭಾಷಿತ :** ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು - ಶಿವರಾಮ ಕಾರಂತ.

## ಮಂಕುತಿಮ್ಮನ ಕಗ್ಗ

**ಮಾನವರೋ ದಾನವರೋ ಭೂಮಾತೆಯನು ತಣಿಸೆ**

**ಶೋಣಿತವನೆರೆಯುವರು ಬಾಷ್ಪಸಲುವುದಿರೆ?**

**ಏನು ಹಗೆ! ಏನು ಧಗೆ!ಏನು ಹೊಗೆ! ಯೀ ಧರಿಣಿ**

**ಸೌನಿಕನ ಕಟ್ಟೆಯೇಂ? – ಮಂಕುತಿಮ್ಮ||೦೨||**

•ಇವರೇನು ಮನುಷ್ಯರೋ ಅಥವಾ ರಾಕ್ಷಸರೋ? ಈ ಭೂಮಾತೆಯನು ತಣಿಸಲು ಅಂದರೆ ದಾಹವಿಂಗಿಸಲು ಕಣ್ಣೀರು ಸುರಿಸುವಬದಲು ರಕ್ತವನ್ನು ಸುರಿಸಿಹರಲ್ಲ! ಈ ಪ್ರಪಂಚದಲ್ಲಿನ ಹಗೆ ಮತ್ತು ಹೊಗೆಗಳನ್ನು ನೋಡಿದರೆ ಇಡೀ ಪ್ರಪಂಚವೇ ಕಟುಕನ ಜಗುಲಿಯಂತಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.


## ಪದ ಹುಡುಕೋಣ – ವೃತ್ತಿಗಳು

| | | | | | | | | | | | |
|---|---|---|---|---|---|---|---|---|---|---|---|
| ಕ್ರಿ | ಗೋ | ಪಾ | ಲ | ಕ | ಟ | ರ್ | ಸಂ | ಗೀ | ತ | ಗಾ | ರ |
| ಯಾ | ಮಿ | ನಿ | ಗೋ | ತ್ರ | ಪಾ | ಅ | ಖಿ | ನಿ | ರ್ದೇ | ಶ | ಕ |
| ಸು | ಮಾ | ತಂ | ಕ | ಜ್ಞ | ಕ | ಧ್ಯಾ | ನ | ಮಾ | ಡು | ನ | ಟ |
| ಯೋ | ಗ | ತ್ರ | ಉ | ತ್ಸಾ | ತ | ಪ | ಹಾ | ವಾ | ಡಿ | ಗ | ಡಿ |
| ಕಾ | ವ್ಯ | ಜ್ಞ | ಬೀ | ಏ | ಜ್ಞ | ಕ | ವಂ | ತಿ | ಗೆ | ಯ | ರೈ |
| ಕಾ | ರ್ಯ | ವ | ಸ್ನು | ಜ್ಞಾ | ಸ | ಜ್ಞ | ನ | ಸ | ಹ | ವಾ | ತ |
| ಸ | ಅ | ಯಾ | ರಿ | ನಿ | ಗೆ | ಸಂ | ಶೋ | ಧ | ಕ | ಬೇ | ಕು |
| ಡ | ಧಿ | ಚ | ಮ್ಮಾ | ರ | ಲ್ಯ | ಕ | ಜಾ | ಪ | ಲ್ಯ | ಕಂ | ಬಿ |
| ಕೋ | ಕಾ | ಆ | ರ | ಕ್ಷ | ಕ | ಮ್ಮಾ | ದೂ | ಳಿ | ಪು | ಸಾ | ರು |
| ಧ | ರಿ | ನ | ಭಾ | ಗ್ಯ | ಕ್ಷ | ರ | ಗಾ | ಪಿ | ರೋ | ರ್ | ಲೇ |
| ಫಿ | ಲಂ | ಪೋ | ನ | ಚಾ | ಲ | ಕ | ರ | ಅ | ಹಿ | ಈ | ಖ |
| ಮೀ | ನು | ಗಾ | ರ | ವೀ | ದ | ಳ್ಯ | ಲ | ದೆ | ತ | ಲೆ | ಕ |
| ಮೌ | ನ | ಬಂ | ಗಾ | ರ | ರ್ಜಿ | ವೇ | ಕೀ | ಸಂ | ಬ | ಡ | ಗಿ |
| ಮಾ | ತು | ಹೂ | ಗಾ | ರ | ಶೂ | ನ್ಯ | ವ | ಬ್ರೇ | ವೈ | ದ್ಯ | ಫ್ |

| | | | | |
|---|---|---|---|---|
| ತಂತ್ರಜ್ಞ | ಲೇಖಕ | ಅಧ್ಯಾಪಕ | ಆರಕ್ಷಕ | ವಿಜ್ಞಾನಿ |
| ವೈದ್ಯ | ನಟ | ಕಮ್ಮಾರ | ಸಂಶೋಧಕ | ವಕೀಲ |
| ನಿರ್ದೇಶಕ | ಚಮ್ಮಾರ | ಜಾದೂಗಾರ | ದರ್ಜಿ | ಸಂಗೀತಗಾರ |
| ಮೀನುಗಾರ | ಪುರೋಹಿತ | ಚಾಲಕ | ರೈತ | ಹೂಗಾರ |
| ಬಡಗಿ | ಹಾವಾಡಿಗ | ಅಧಿಕಾರಿ | ಗೋಪಾಲಕ | ಪಾಕತಜ್ಞ |

ಕೃಪೆ : ಮಕ್ಕಳ ಕ್ವಿಜ್ ಪುಸ್ತಕ –ಎನ್. ಪ್ರಭಾ

## ಚಿತ್ರ ಶೀರ್ಷಿಕೆ : ಕಿರಣ್ ಯೆಲಿಮೆಲಿ




**ಆಡೂ ಆಟ ಆಡೂ ನಿ ಆಡೂ ಆಡೂ ಆಡಿ ನೋಡು...**

ಸಂಚಿಕೆ ೧೧
ನವೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ



**ಪತ್ರ ೫**

**ಪ್ರೀತಿಯ ಪುಟಾಣಿಗಳೆ,**

ನಿಮಗೆಲ್ಲಾ ಕರ್ನಾಟಕದ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಜಾನಪದ ಚರಿತ್ರೆಬಗ್ಗೆ ಏನೇನು ಗೊತ್ತು ನಿಮಗೆ? ಪ್ರಪಂಚ ಸೃಷ್ಟಿಯ ಇತಿಹಾಸದಲ್ಲಿ ಸಂಸ್ಕೃತ ಮತ್ತು ಗ್ರೀಕ್ ನಂತರದ ಮೂರನೆ ಪ್ರಾಚೀನಭಾಷೆ ಎನ್ನಿಸಿಕೊಂಡ ಕನ್ನಡಕ್ಕೆ ಇದೀಗ ೨೦೦೦ವರ್ಷ ವಯಸ್ಸು. ಕನ್ನಡದ ಮೊಟ್ಟಮೊದಲ ಉಪಲಬ್ಧಕೃತಿ ಕವಿರಾಜಮಾರ್ಗದ ಕರ್ತೃ ಅಮೋಘವರ್ಷ ನೃಪತುಂಗ. ಅವನು ಕಾವೇರಿಯಿಂ ಗೋದಾವರಿಪರ್ಯಂತ ಪಸರಿಸಿದ ಕನ್ನಡನಾಡನ್ನು ಬಣ್ಣಿಸುತ್ತಿದ್ದ ಹೊತ್ತಿನಲ್ಲಿ ಇಂಗ್ಲಿಷ್‌ಭಾಷೆ ಇನ್ನೂ ತೊಟ್ಟಿಲಬಿಟ್ಟು ಇಳಿದಿರಲಿಲ್ಲ, ಹಿಂದಿಭಾಷೆ ಹುಟ್ಟೇಯಿರಲಿಲ್ಲ. ಇಂಗ್ಲಿಷ್‌ಭಾಷೆ ತನ್ನ ಬರೆವಣಿಗೆಗೆ ರೋಮನ್‌ಲೆಟರ್ಸ್ ಬಳಸಿದರೆ, ಹಿಂದಿ ದೇವನಾಗರಿ ಅರ್ಥಾತ್ ಸಂಸ್ಕೃತವರ್ಣಮಾಲೆ ಅವಲಂಬಿಸುತ್ತಿದೆ. ಉಚ್ಚರಿಸುವ ಇಂಗ್ಲಿಷ್‌ಗೂ ಬರೆಯುವ ಇಂಗ್ಲಿಷ್‌ಗೂ ಚಿತ್ರವಿಚಿತ್ರ ವ್ಯತ್ಯಾಸಗಳೆ ಇವೆ. ಆದರೆ ಮಾತಾಡುವದನ್ನೆ ಬರೆಯುವ, ಬರೆದಂತೆಯೆ ಓದುವ ಕನ್ನಡ ಶೇಕರ್ಡಾ೯.೯ ರಷ್ಟು ತಾರ್ಕಿಕವೂ ವೈಜ್ಞಾನಿಕವೂ ಆದ ಭಾಷೆ. ಕನ್ನಡ ಅಕ್ಷರಮಾಲೆಯ ಅಲ್ಪಸ್ವಲ್ಪ ವ್ಯತ್ಯಾಸದಿಂದ ರೂಪುಗೊಂಡಂತಿದೆ ಲಿಖಿತ ತೆಲುಗು ಅಕ್ಷರಮಾಲೆ. ನಮ್ಮ ಸುಂದರಕನ್ನಡ ಅಕ್ಷರಮಾಲೆಯನ್ನು ವಿನೋಬಾ ಭಾವೆಯವರು ವಿಶ್ವಲಿಪಿಗಳರಾಣಿ ಎಂದೇ ಹೊಗಳಿ ದ್ದಾರೆ. ಆದಿಕವಿಯಿಂದ ಆಧುನಿಕ ಕವಿಗಳವರೆಗೆ ಕನ್ನಡ ದೇಶಪ್ರೇಮ ಭಾಷಾಪ್ರೇಮ ಮೆರೆದವರಿದ್ದಾರೆ: ಆರಂಕುಶವಿಟ್ಟಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ(ಪಂಪ); ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ(ಕುವೆಂಪು); ಕಣ್ಣ ಕಣ್ಣೊಳಿಸಿ ಉಸಿರ ಎಳೆ ಎಳಸಿ ನುಡಿಯ ಸೊಸಿ ಮೊಳೆಸಿ ಹಿಗ್ಗಿ ಬಾ\ಇಳಿದು ಬಾ ತಾಯಿ ಇಳಿದು ಬಾ(ಬೇಂದ್ರೆ); ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು(ನಾರಾಯಣರಾವ್); ಹಚ್ಚೇವು ಕನ್ನಡದ ದೀಪ(ಕರ್ಕಿ); ಪರ್ಪಂಚ್ ಇರೋ ತನಕ ಮುಂದೆ\ ಕನ್ನಡ್ ಪದಗೊಳ್ ನುಗ್ಲಿ (ರಾಜರತ್ನಂ); ಕಟ್ಟುವೆವು ನಾವು ಹೊಸನಾಡೊಂದನು(ಅಡಿಗ); ಕನ್ನಡವೆಂದರೆ ಬರಿ ಕರ್ನಾಟಕವಲ್ಲ\ ಅಸೀಮ, ಅದು ಅದಿಗಂತ (ನಿಸಾರ್); ಸುರಸುಂದರ ತರುಲತೆಗಳ ಬೃಂದಾವನಲೀಲೆ(ಸಾ.ಶಿ.ಮರುಳಯ್ಯ); ಕನ್ನಡ ಬರ್‍ರಿ ನಮ್ಮ ಸಂಗಡ(ಚಂಪಾ); ಜಗದ ಎಲ್ಲೆಡೆಗು ಹಬ್ಬಿದೆ ಇಂದು\ಕನ್ನಡದ ಕರುಳಬಳ್ಳಿ(ಲಕ್ಷ್ಮಣರಾವ್); ಒಂದು ನಾಡಿನ ಒಳಗೇ ಹಲವು ಜಗತ್ತು(ರವೀಂದ್ರಕುಮಾರ್). ಯಾವುದೆ ವಿಶ್ವಭಾಷೆಗೆ ಹೆಗಲೆಣೆಯಾಗಿನಿಲ್ಲಬಲ್ಲ ವರ್ಲ್ಡ್‌ಕ್ಲ್ಯಾಸ್ ಲ್ಯಾಂಗ್ವೆಜ್ ನಮ್ಮ ಕನ್ನಡ. ಭೌತವಿಜ್ಞಾನ ಬೆಳಕಿದ್ದಲ್ಲಿ ಕತ್ತಲಿರದು ಕತ್ತಲಿದ್ದಲ್ಲಿ ಬೆಳಕಿರದು ಅನ್ನುತ್ತದೆ ಅಲ್ಲವೆ? ಆದರೆ ಬೆಳಕಿನಲ್ಲೆ ಕತ್ತಲಿದೆ ಕತ್ತಲಲ್ಲೆ ಬೆಳಕಿದೆ (ಅಪರಿಮಿತ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೊ\ ಬೆಳಕೂ ಅದೆ ಕತ್ತಲೆಯೂ ಅದೆ ಒಂದಕ್ಕೊಂದಂಜದು) ಎಂದು ನಾಳೆಗಳ ವಿಶೇಷ ವಿಜ್ಞಾನದ ಬೆಡಗಿನ ಕಣಿಹೇಳಿರುವ ವೈಜ್ಞಾನಿಕ ಅನುಭಾವಿ ಅಲ್ಲಮಪ್ರಭು ಅಪ್ಪಟ ಕನ್ನಡಿಗ. ಹುಟ್ಟೂರು ಉಡುತಡಿಯಿಂದ ಶ್ರೀಶೈಲಶಿಖರದ ವರೆಗೆ ಚಿಲಿಮಿಲಿ ಎಂದೋದುವ ಗಿಳಿಗಳಿರಾ! ನೀವು ಕಾಣಿರೇ? ನೀವು ಕಾಣಿರೇ? ಎಂದು ಭಾವಾರ್ದ್ರ ವಚನಗಳಕಟ್ಟಿ ಹಾಡುತ್ತ ದಿಗಂಬರಿಯಾಗಿ ಕಾಲ್ನಡಿಗೆಯಲ್ಲಿಹೋಗಿ ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯಳಾದ ಅಕ್ಕಮಹಾದೇವಿ ಕನ್ನಡ ಸಂಸ್ಕೃತಿಯ ಜೀವಾಳವೆ ಸರಿ. ಕಳಬೇಡ ಕೊಲಬೇಡ\ ಹುಸಿಯ ನುಡಿಯಲು ಬೇಡ\ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ\ ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ\ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ\ ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ. ಈ ವಚನ ಕೇಳಿರಬೇಕಲ್ಲ ನೀವೆಲ್ಲ? ಇದು ೧೨ನೆ ಶತಮಾನದ ಸಮಾಜವಾದಿ ಸ್ವಾನುಭಾವಿ ವಚನಕಾರ ಬಸವಣ್ಣನ ಜನಪ್ರಿಯ ರಚನೆ. ಕಾರ್ಲ್‌ಮಾರ್ಕ್ಸ್‌ಗೂ ಎಂಟುನೂರುವರ್ಷಗಳಮೊದಲೇ ಕರ್ನಾಟಕದಲ್ಲಿ ಸಮಾಜವಾದದ ಸಸಿನೆಟ್ಟ ಬಸವಣ್ಣ ಮಹಾನ್ ಕನ್ನಡಿಗ.



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

ಈ ಏಳು ಕೆಟ್ಟಕೆಲಸಗಳನ್ನು ಮಾಡಲೇಬೇಡ ಬಿಟ್ಟುಬಿಡು ಎಂದು ಕಿವಿಮಾತು ಹೇಳುತ್ತಿದ್ದಾನೆ ಭಾವಶುದ್ಧಿಗೆ ಹೆಸರಾದ ಈ ಶಿವಶರಣ. ಇದು ಬಹಿರಂಗದಲ್ಲಿ ಬೇರೆಯವರಿಗೆ ಹೇಳುವ ಹಿತವಚನವಷ್ಟೆ ಅಲ್ಲ; ಅಂತರಂಗದಲ್ಲಿ ತನಗೆತಾನೆ ಕೊಟ್ಟುಕೊಳ್ಳುವ ಎಚ್ಚರಿಕೆ ಕೂಡ. ಇದರಲ್ಲಿ ಸಾಮಾಜಿಕ ರೀತಿ ವೈಯಕ್ತಿಕ ನೀತಿ ಎರಡೂ ಹದವಾಗಿ ಬೆರೆತುಕೊಂಡಿವೆ. ವಿಧಿ–ನಿಷೇಧ ಎಂದು ಸಂಸ್ಕೃತದಲ್ಲಿ, ಡೂ–ಡೋಂಟ್ ಎಂದು ಇಂಗ್ಲಿಷ್‌ನಲ್ಲಿ ಹೇಳುವುದನ್ನೆ ಕನ್ನಡದಲ್ಲಿ ಮಾಡು–ಬೇಡ ಎಂಬ ಜೋಡಿಪದ ಹೇಳುತ್ತವೆ. ವೈಯಕ್ತಿಕ ಸಾಂಸಾರಿಕ ಹಾಗು ಸಾಮಾಜಿಕ ನೆಲೆಯಲ್ಲಿ ಅರ್ಥಪೂರ್ಣವಾಗಿ ಬದುಕಬೇಕೆಂದರೆ ಇತ್ಯಾತ್ಮಕ(ಪಾಸಿಟಿವ್)ವಾದದ್ದನ್ನ ಮಾಡಬೇಕು, ನೇತ್ಯಾತ್ಮಕ (ನೆಗೆಟಿವ್)ವಾದದ್ದನ್ನ ಬಿಡಬೇಕು ತಾನೆ? ಇದನ್ನ ಎಲ್ಲಕಾಲದ ಎಲ್ಲದೇಶಗಳ ಸಂತರೂ ಮಹಾತ್ಮರೂ ಮತ್ತೆಮತ್ತೆ ಹೇಳುತ್ತಾ ಬಂದಿದ್ದಾರೆ. ನೇರವಾಗಿ ದೇವರಿಂದಲೆ ಹತ್ತುಆಜ್ಞೆಗಳ (ಟೆನ್ ಕಮ್ಯಾಂಡ್‌ಮೆಂಟ್ಸ್) ಶಿಲಾಫಲಕಗಳನ್ನ ಪಡೆದನಲ್ಲ ಪ್ರಾಚೀನ ಇಜಿಪ್ಟ್‌ನ ಯಹೂದಿ ಪ್ರವಾದಿ ಮೋಸೆಸ್. ಅವನ ಹತ್ತು ಬೋಧನೆಗಳಲ್ಲಿ ಕೆಳಗಿನ ಐದು ಇಂಥದನ್ನೆ ಹೇಳಿವೆ. ಗ್ರೇಟ್ ಮೆನ್ ಥಿಂಕ್ ಅಲೈಕ್ ಎಂಬ ನಾಣ್ಣುಡಿ ಹೀಗೆ ನಿಜವಾಗಿದೆಯಲ್ಲವೆ? ಸ್ವಂತೂರು ಹೊನ್ನಾಳಿಯಲ್ಲಿ ಓದಿದಕಾಲೇಜಿನಲ್ಲೆ ಪ್ರಿನ್ಸಿಪಲ್‌ಆದಾಗ ವಿದ್ಯಾರ್ಥಿ\ನಿಯರು ರಾಷ್ಟ್ರಗೀತೆ ನಾಡಗೀತೆ ಜೊತೆ ಬಸವಣ್ಣನ ಈ ಸಾಮಾಜಿಕ ಕನ್ನಡ ಮಂತ್ರವನ್ನು ಹೇಳುವ ವ್ಯವಸ್ಥೆಮಾಡಿದ್ದು ನೆನಪಾಗುತ್ತಿದೆ.

ಕನ್ನಡದಲ್ಲಿ ಮಹಾತ್ಮರು ಮೇಧಾವಿಗಳು ಸಾಕಷ್ಟಿದ್ದಾರೆ: ದೇವರ ದಾಸಿಮಯ್ಯ ಬಸವಣ್ಣ ಅಕ್ಕ ಅಲ್ಲಮರಂಥ ೧೨ನೆ ಶತಮಾನದ ಶಿವಶರಣರು, ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸ, ಅನನ್ಯ ಕೃಷ್ಣಸಖ ಕನಕದಾಸ, ತಿರುಗಾಟದ ಜನಪ್ರಿಯಕವಿ ಸರ್ವಜ್ಞ, ತತ್ವಪದಸಂತ ಶರೀಫ, ಜ್ಞಾನಪೀಠ ವಿಜೇತರೂ ಆಧುನಿಕ ಕಾವ್ಯಸಾಹಿತ್ಯ ಶಿಖರಗಳೂ ಆದ ಕುವೆಂಪು, ಬೇಂದ್ರೆ, ಕಾರಂತ, ಮೇಘಘರ್ಜನೆ ನಾದರ್ಷಿ ಭೀಮ್‌ಸೇನ್‌ಜೋಶಿ, ಗಂಡುದನಿಯ ಗಂಗೂಬಾಯಿ ಹಾನಗಲ್, ವಿಶ್ವವಿಖ್ಯಾತ ಇಂಜಿನಿಯರ್ ಸರ್‌ಎಂ.ವಿಶ್ವೇಶ್ವರಯ್ಯ, ಅಪರೂಪದ ನೇತ್ರತಜ್ಞ ಡಾ.ಎಂ.ಸಿ.ಮೋದಿ, ಸಿದ್ಧಗಂಗಾಮಠದ ಕಾಯಕ ಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ, ಸಾಧುಯತಿ ಶ್ರೀ ವಿಶ್ವೇಶತೀರ್ಥಸ್ವಾಮೀಜಿ, ಮಾಂತ್ರಿಕ ತಂತ್ರಜ್ಞಾನಿ ನಾರಾಯಣಮೂರ್ತಿ, ಜನರಂಜನೆಯ ಕ್ರಿಕೆಟ್ಟಿಗರಾದ ಜಿ.ಆರ್. ವಿಶ್ವನಾಥ್, ಇ.ಪ್ರಸನ್ನ, ಸಿ.ಚಂದ್ರಶೇಖರ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಬಾಲಿವುಡ್‌ನ ಪ್ರತಿಭಾನ್ವಿತ ನಿರ್ದೇಶಕ ರಾದ ಗುರುದತ್, ಶ್ಯಾಂ ಬೆನೆಗಲ್, ಸಕಲಕಲಾವಲ್ಲಭ ವರನಟ ರಾಜಕುಮಾರ್, ಕನ್ನಡ–ತಮಿಳು ಮೇರುನಟ ರಜನೀಕಾಂತ್, ಸುರಸುಂದರಿಯರೂ ಅಪೂರ್ವನಟಿಯರೂ ಆದ ಐಶ್ವರ್ಯಾ ರೈ, ದೀಪಿಕಾ ಪಡುಕೋಣೆ, ನಂದಾ ಕರ್ನಾಟಕಿ, ಶಿಲ್ಪಾಶೆಟ್ಟಿ ಇವರೆಲ್ಲರೂ ಕನ್ನಡ ಪ್ರತಿಭೆಗಳೆ ಗೊತ್ತಾ? ನೀವುಗಳೂ ನಾಳೆ ಈ ಪ್ರತಿಭಾವಂತರಸಾಲಿಗೆ ಸೇರಲಿರುವ ಪುಟಾಣಿ ನಕ್ಷತ್ರಗಳೆ ತಾನೆ? ಬಹುಶಃ ಅದಕ್ಕೆಂದೆ ಅಮೆರಿಕದ ಶಾರ್ಲೆಟ್‌ಸಿಟಿಯಲ್ಲೂ ಕನ್ನಡ ಪಾಠಶಾಲೆ ಅಟೆಂಡ್‌ಮಾಡುತ್ತಿರುವ ನೀವೇ ಧನ್ಯರು. ಕನ್ನಡವೆಂದರೆ ಕಾಡುವ ಹಚ್ಚಹಸಿರಂತೆ ಎಂದು ಬಿಂಬಿಸುವ 'ಕಾನನ' ಎಂಬ ಆರೆನಿಮಿಷದ ಕಿರುಚಿತ್ರಕ್ಕೆ ೨೦೧೮ರ ಅಕ್ಕಸಮ್ಮೇಳನದ ಎರಡನೆ ಬಹುಮಾನ ಬಂದಿದೆ ಗೊತ್ತಾ? ಅದರಲ್ಲಿ ಸಾಗರದ ಹಿರಿ–ಕಿರಿ ಸಾಹಿತಿ ನಾ.ಡಿಸೋಜಾ ಹಾಗೂ ವಿಜಯವಾಮನ್ ಇಬ್ಬರೆ ಪಾತ್ರಧಾರಿಗಳು. ನಿಮ್ಮ ಕನ್ನಡಮೇಡಂ ರಜನೀ ಮಹೇಶ್ ಹತ್ತಿರ ವೀಡಿಯೊಲಿಂಕ್ ಇದೆ. ಅವರನ್ನ ಕೇಳಿ ಕೊಡುತ್ತಾರೆ.

**ನವೆಂಬರ್ ೧. ಕನ್ನಡರಾಜ್ಯೋತ್ಸವ** **ನಿಮ್ಮ ಮೂರ್ತಿ ತಾತ**



ಸಂಚಿಕೆ ೧೧
ನವೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್
rajanisomayaji@gmail.com